Com.O.S. 09/2021
PW-1

ಈ ದಿನ ದಿನಾಂಕ **04.03.2026** ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ ಪ್ರತಿವಾದಿಯ ಪರವಾಗಿಃ

**1.** ನಾನು ಮೂಲತಃ ಬೈಲಹೊಂಗಲದವನು. ನಾನು ಐಟಿಐವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ವಿದ್ಯಾಭ್ಯಾಸ **1996** ನೇ ಸಾಲಿನಲ್ಲಿ ಮುಗಿದಿತ್ತು. ಐಟಿಐ ಆದ ನಂತರ ನನಗೆ ಯಾವುದೇ ನೌಕರಿ ಸಿಕ್ಕಿರಲಿಲ್ಲ. ಆ ಕಾಲಕ್ಕೆ ನನಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಎನ್ನುವುದು ನಿಜ.

**2.** ನನಗೆ ಸುಮಾರು **20** ವರ್ಷ ವಯಸ್ಸು ಇದ್ದಾಗ ನಾನು ರಸ್ತೆಯ ಪಕ್ಕ ಅಂಗಡಿ ನಡೆಸುವವರ ಬಳಿ ಕೆಲಸ ಮಾಡುತ್ತಿದ್ದೆ ಎನ್ನುವುದು ನಿಜವಲ್ಲ. ನನಗೆ ಯಾವುದೇ ಜಮೀನು ಇರುವುದಿಲ್ಲ. ನನ್ನ ತಂದೆ ಪಿ ಡಬ್ಲ್ಯೂ ಡಿ ಇಲಾಖಲೆಯ ಐಬಿಯಲ್ಲಿ ನೌಕರಿ ಮಾಡುತ್ತಿದ್ದರು ಎನ್ನುವುದು ನಿಜವಲ್ಲ. ನನ್ನ ತಂದೆಯನ್ನು ಆ ನೌಕರಿಯಿಂದ ವಜಾ ಮಾಡಲಾಗಿತ್ತು ಎನ್ನುವುದು ನಿಜವಲ್ಲ. ನನ್ನ ತಂದೆ ನೌಕರಿಯಲ್ಲಿದ್ದು ವಯೋ ನಿವೃತ್ತಿ ಪಡೆದಿದ್ದರು ಎಂದು ನಾನು ಹೇಳುತ್ತೇನೆ. ಅದರ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ನನ್ನ ತಂದೆ ತಾತ್ಕಾಲಿಕ ನೌಕರಿಯಲ್ಲಿದ್ದರು ಮತ್ತು ಅವರನ್ನು ಆ ಕೆಲಸದಿಂದ ವಜಾ ಮಾಡಲಾಗಿತ್ತು ಎನ್ನುವುದು ನಿಜವಲ್ಲ. ನನ್ನ ತಂದೆಗೆ ಪಿಂಚಣಿ ಬರುತ್ತಿದೆ. ಈ ಬಗ್ಗೆ ದಾಖಲೆಗಳು ನನ್ನ ತಂದೆಯ ಬಳಿ ಇರಬಹುದು, ಆದರೆ ನನ್ನ ಬಳಿ ಇಲ್ಲ.

**3.** ಪ್ರತಿವಾದಿಯ ಗಂಡ ರಾಮದುರ್ಗ ತಾಲ್ಲೂಕಿನ ಸಾಲಳ್ಳಿ ಗ್ರಾಮದವರು ಎನ್ನುವುದು ನಿಜ. ಪ್ರತಿವಾದಿಯ ಗಂಡ ಸರ್ಕಾರಿ ಸರಾಯಿ ಗುತ್ತಿಗೆದಾರರಾಗಿದ್ದರು ಎನ್ನುವುದು ನಿಜ. ಪ್ರತಿವಾದಿಯ ಗಂಡ ಪುಂಡಲೀಕ ಜೊರಾಪುರ **1983-84** ನೇ ಸಾಲಿನಲ್ಲಿ ಬಾರ್ ಆ್ಯಂಡ್ ರೆಸ್ಟೊರೆಂಟನ್ನು ನಡೆಸಲು ಲೈಸನ್ಸನ್ನು ಪಡೆದಿದ್ದರು ಎನ್ನುವುದು ನಿಜ. ಆ ಲೈಸೆನ್ಸ ಮೂಲಕ ಪ್ರತಿವಾದಿಯ ಗಂಡ ಬೈಲಹೊಂಗಲದ ಬಸ್ ನಿಲ್ದಾಣದ ಮುಂಭಾಗದಲ್ಲಿ ಅನ್ನಪೂರ್ಣಾ ಪೆಗ್ ಬಾರ್ ನ್ನು ನಡೆಸುತ್ತಿದ್ದರು

ಎನ್ನುವುದು ನಿಜ. ಆ ಬಾರ್ ನ್ನು ಪ್ರತಿವಾದಿಯ ಗಂಡ ಅಶೋಕ ಯರಗಟ್ಟಿ ಎನ್ನುವವರಿಂದ ಪಡೆದ ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದರು ಎನ್ನುವುದು ನಿಜ. ಆ ಬಾರ್ ನಲ್ಲಿ ರಮೇಶ ಚೌಗಲೆ ಎನ್ನುವವರು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆಗ ನನಗೆ ಯಾವುದೇ ನೌಕರಿ ಇಲ್ಲದೇ ಇದ್ದ ಕಾರಣ ಪ್ರತಿವಾದಿಯ ಗಂಡ ನನಗೆ ಆತನ ಬಾರ್ ನಲ್ಲಿ ತಿಂಗಳಿಗೆ ರೂ.3,000/- ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟಿದ್ದರು ಎನ್ನುವುದು ನಿಜವಲ್ಲ. ಸುಮಾರು ಎರಡು ವರ್ಷಗಳ ನಂತರ ನನ್ನ ಸಂಬಳವನ್ನು ತಿಂಗಳಿಗೆ ರೂ.5,000/- ಕ್ಕೆ ಹೆಚ್ಚಿಸಿ ಸಪ್ಲಾಯರ್ ಕೆಲಸ ಕೊಟ್ಟಿದ್ದರು ಎನ್ನುವುದು ನಿಜವಲ್ಲ. 2008 ರಲ್ಲಿ ಪ್ರತಿವಾಯ ಗಂಡ ನನ್ನನ್ನು ಅನ್ನಪೂರ್ಣಾ ಪೆಗ್ ಬಾರ್ ನಲ್ಲಿ ಮ್ಯಾನೇಜರ್ ಆಗಿ ನೇಮಿಸಿದ್ದರು ಎನ್ನುವುದು ನಿಜವಲ್ಲ.

4. ನನ್ನ ವಿದ್ಯಾಭ್ಯಾಸ ಮುಗಿದ ನಂತರ 2008 ನೇ ಸಾಲಿನವರೆಗೆ ನನಗೆ ಯಾವುದೇ ನೌಕರಿ ಮತ್ತು ಆದಾಯ ಇರಲಿಲ್ಲ ಎನ್ನುವುದು ನಿಜವಲ್ಲ. 1996 ನೇ ಸಾಲಿನಿಂದ 2008 ನೇ ಸಾಲಿನವರೆಗೆ ಎಲ್ಲಿ ನೌಕರಿ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಇಂಚಲ ಮಠದ ಹಾಸ್ಟೇಲ್‌ನ್ನು ಕಾಂಟ್ರ್ಯಾಕ್ಟ ಮೇಲೆ ನಡೆಸುತ್ತಿದ್ದೆ ಎನ್ನುತ್ತಾರೆ. ಈ ಬಗ್ಗೆ ನನ್ನ ಬಳಿ ದಾಖಲಾತಿಗಳು ಇವೆ. ಇದರ ಬಗ್ಗೆ ನಾನು ಇಂಚಲ ಮಠದವರನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ. ನಾನು ಯಾವುದೇ ಮಠದ ಹಾಸ್ಟೇಲನ್ನು ಕಾಂಟ್ರ್ಯಾಕ್ಟ ಮೂಲಕ ನಡೆಸುತ್ತಿರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

5. ನನಗೆ ಪ್ರತಿವಾದಿಯ ಗಂಡನ ಪರಿಚಯ 2009 ನೇ ಸಾಲಿನಲ್ಲಿ ಆಗಿತ್ತು. 2009 ನೇ ಸಾಲಿನಲ್ಲಿ ನಾನು ವರಮಾನ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. 2009 ರಲ್ಲಿ ನನಗೆ ಯಾವ ಬ್ಯಾಂಕನಲ್ಲಿ ಖಾತೆ ಇತ್ತು ಎನ್ನುವುದು ನನಗೆ ನೆನಪಿಲ್ಲ. 2009 ರಲ್ಲಿ ನನಗೆ ಯಾವುದೇ ಆದಾಯ ಮೂಲ ಇರಲಿಲ್ಲ ಮತ್ತು ನನ್ನ ಆರ್ಥಿಕ ಪರಿಸ್ಥಿತಿ

ಗಂಭೀರವಾಗಿತ್ತು ಎನ್ನುವುದು ನಿಜವಲ್ಲ. **2009** ನೇ ಸಾಲಿನಲ್ಲಿ ನನ್ನ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣ ಇತ್ತು ಎಂದು ಈಗ ನನಗೆ ನೆನಪಿಲ್ಲ.

**6.** ಅನ್ನಪೂರ್ಣಾ ಬಾರ್ ನ ಒಳಗಡೆ ಕಂಪ್ಯೂಟರ, ಚೇರ್, ಟೇಬಲ್, ರಾಕ್ ಮತ್ತು ಅಡುಗೆ ಮಾಡುವ ಸಾಮಾನುಗಳು ಇದ್ದವು ಎನ್ನುವುದು ನಿಜವಲ್ಲ. **2009** ನೇ ಸಾಲಿನ ಜುಲೈ ತಿಂಗಳಲ್ಲಿ ನಾನು ಮೊದಲ ಬಾರಿಗೆ ಅನ್ನಪೂರ್ಣಾ ಬಾರ್ ಗೆ ಹೋಗಿದ್ದೆ ಎಂದು ನಾನು ಹೇಳುತ್ತೇನೆ. ನಾನು ಹೋದಾಗ ಆ ಬಾರ್ ನಲ್ಲಿ ವ್ಯವಹಾರ ನಡೆಯುತ್ತಿತ್ತು. ನಾನು ಹೋದಾಗ ಆ ಬಾರ್ ನ ಒಳಗಡೆ ಅದನ್ನು ನಡೆಸಲು ಬೇಕಾಗುವ ಎಲ್ಲಾ ವಸ್ತುಗಳು ಇದ್ದವು ಮತ್ತು ಗಿರಾಕಿಗಳು ಕೂಡಾ ಇದ್ದರು.

**7.** **2011** ರಲ್ಲಿ ಪ್ರತಿವಾದಿಯು ಅನ್ನಪೂರ್ಣಾ ಬಾರನ್ನು ಬೈಲಹೊಂಗಲದ ಬಸ್ ನಿಲ್ದಾಣದ ಮುಂಭಾಗ ಇರುವ ಕಟ್ಟಡದಿಂದ ಇಂಚಲ ಕ್ರಾಸ್‌ನಲ್ಲಿ ಇರುವ ಒಂದು ಕಟ್ಟಡಕ್ಕೆ ಎಲ್ಲಾ ಸಾಮಗ್ರಿಗಳೊಂದಿಗೆ ಶಿಫ್ಟ್ ಮಾಡಿದ್ದರು ಎಂದರೆ ಸಾಕ್ಷಿ **2013** ರಲ್ಲಿ ಮಾಡಿದ್ದರು ಎನ್ನುತ್ತಾರೆ. ಆ ಹೊಸ ಕಟ್ಟಡದಲ್ಲಿ ನೆಲಮಹಡಿ ಮತ್ತು ಮೊದಲನೇ ಮಹಡಿ ಸೇರಿ ಒಟ್ಟು **4000** ಚದರ ಅಡಿ ಇತ್ತು ಎನ್ನುವುದು ನಿಜ. ಪ್ರತಿವಾದಿಯ ಗಂಡ ಪ್ರತಿದಿನ ಸಾಲಹಳ್ಳಿಯಿಂದ ಬೈಲಹೊಂಗಲಕ್ಕೆ ಬಂದು ಬೆಳಿಗ್ಗೆ **10.00** ರಿಂದ ರಾತ್ರಿ **11.00** ಗಂಟೆಯವರೆಗೆ ಅನ್ನಪೂರ್ಣಾ ಬಾರ್ ಆ್ಯಂಡ್ ರೆಸ್ಟೊರೆಂಟನಲ್ಲಿ ಇರುತ್ತಿದ್ದರು ಎನ್ನುವುದು ನಿಜವಲ್ಲ. **2009** ಕ್ಕಿಂತ ಮೊದಲು ಕೂಡಾ ಪ್ರತಿವಾದಿಯ ಗಂಡ ಪ್ರತಿದಿನ ಸಾಲಹಳ್ಳಿಯಿಂದ ಬೈಲಹೊಂಗಲಕ್ಕೆ ಬಂದೆ ಆ ಬಾರ್ ನ ವ್ಯವಹಾರವನ್ನು ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡನಿಗೆ ಬೈಲಹೊಂಗಲದಲ್ಲಿ ಇರಲು ಯಾವುದೇ ಆಸ್ತಿ ಇರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡ ತನ್ನ ಅನಾರೋಗ್ಯದ ಕಾರಣ **1994** ರಲ್ಲಿ ಸಾಲಹಳ್ಳಿಯಿಂದ ಗೋಕಾಕಕ್ಕೆ ಶಿಫ್ಟ್ ಆಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಗೋಕಾಕನಲ್ಲಿ ಇರುವ ಕಾಲಕ್ಕೆ ಪ್ರತಿವಾದಿಯ ಗಂಡ ಪ್ರತಿದಿನ ಬೆಳಿಗ್ಗೆ **10.00** ಗಂಟೆಯಿಂದ ರಾತ್ರಿ **11.00** ಗಂಟೆಯವರೆಗೆ

ಬೈಲಹೊಂಗಲದ ಅನ್ನಪೂರ್ಣಾ ಬಾರ್ ನ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು ನಿಜವಲ್ಲ.

**8.** **2009** ಕ್ಕಿಂತ ಮೊದಲು ಪ್ರತಿವಾದಿಯ ಗಂಡ ಎಲ್ಲಿಂದ ಬೈಲಹೊಂಗಲಕ್ಕೆ ಬರುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅನ್ನಪೂರ್ಣಾ ಬಾರ್ ಆ್ಯಂಡ್ ರೆಸ್ಟೊರೆಂಟನ ಆದಾಯದಿಂದ ಪ್ರತಿವಾದಿಯ ಗಂಡ **1994** ರಲ್ಲಿ ಗೋಕಾಕನಲ್ಲಿ ಮನೆ ಖರೀದಿ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡ ಯಾವತ್ತು ಕೂಡಾ ವಾಸ ಮಾಡಲು ಬೈಲಹೊಂಗಲದಲ್ಲಿ ಇರುತ್ತಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡನಿಗೆ ಪ್ರತಿನಿತ್ಯ ಬೈಲಹೊಂಗಲಕ್ಕೆ ಪ್ರಯಾಣ ಮಾಡುತ್ತಿದ್ದರಿಂದ ಹೃದಯ ಮತ್ತು ಮೂತ್ರಪಿಂಡದ ತೊಂದರೆಯಾಗಿತ್ತು ಎನ್ನುವುದು ನಿಜವಲ್ಲ. ಆ ಖಾಯಿಲೆಯ ಬಗ್ಗೆ ಪ್ರತಿವಾದಿಯ ಗಂಡ ಹುಬ್ಬಳ್ಳಿಯ ಡಾಕ್ಟರ ಹರೀಶ ಜೋಶಿ ಎನ್ನುವವರಿಂದ ಸತತವಾಗಿ ಚಿಕಿತ್ಸೆ ಪಡೆದುಕೊಂಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. **2006** ರಲ್ಲಿ ಪ್ರತಿವಾದಿಯ ಗಂಡನಿಗೆ ಹೃದಯಾಘಾತವಾಗಿ ಬೈಪಾಸ್ ಸರ್ಜರಿ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

**9.** **2007** ರಲ್ಲಿ ಪ್ರತಿವಾದಿಯ ಗಂಡ ತನ್ನ ಅನಾರೋಗ್ಯದ ಕಾರಣ ಪ್ರತಿನಿತ್ಯ ಬೈಲಹೊಂಗಲದ ಅನ್ನಪೂರ್ಣಾ ಬಾರ್ ಗೆ ಬರುತ್ತಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಅದೇ ಸಮಯಕ್ಕೆ ಪ್ರತಿವಾದಿಯ ಗಂಡ ನನ್ನನ್ನು ಅನ್ನಪೂರ್ಣಾ ಬಾರ್ ಗೆ ಮ್ಯಾನೇಜರ್ ಅಂತಾ ನೇಮಕ ಮಾಡಿದ್ದರು ಎನ್ನುವುದು ಸುಳ್ಳು. ನಾನು ಪ್ರತಿವಾದಿಯ ಗಂಡನ ಅಡಿಯಲ್ಲಿ ಮ್ಯಾನೇಜರ್ ಎಂದು ನೌಕರಿ ಮಾಡುತ್ತಿದ್ದೆ ಎನ್ನುವುದು ನಿಜವಲ್ಲ. ನಾನು ಅನ್ನಪೂರ್ಣಾ ಬಾರ್ ಆ್ಯಂಡ ರೆಸ್ಟೊರೆಂಟನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿ ಅಬಕಾರಿ ಇಲಾಖೆಯಿಂದ ನೌಕರನಾಮಾ ಪಡೆದುಕೊಂಡಿದ್ದೇನೆ ಎನ್ನುವುದು ನಿಜವಲ್ಲ. ಈ ದಾವೆ ಮೊದಲು ಒಂದು ಏಕತರ್ಫಿ ಡಿಕ್ರಿಯಾಗಿತ್ತು.

**10.** ಪ್ರತಿವಾದಿಯು ಮಿಸಲೇನಿಯಸ್ ಸಂಖ್ಯೆ **49/2022** ನ್ನು ಸಲ್ಲಿಸಿ ಆ ಏಕತರ್ಫಿ ಡಿಕ್ರಿಯನ್ನು ರದ್ದು ಮಾಡಿಸಿ ಆ ಬಳಿಕ ಈ ದಾವೆಯನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಲಾಗಿತ್ತು ಎನ್ನುವುದು ನಿಜ. ಆ ಮಿಸಲೇನಿಯಸ್ ಅರ್ಜಿಯಲ್ಲಿ ನನ್ನ ಸಾಕ್ಷಿ ವಿಚಾರಣೆಯಾಗಿತ್ತು. ಆ ನನ್ನ ಸಾಕ್ಷಿ ವಿಚಾರಣೆಯಲ್ಲಿ ನಾನು ನೌಕರನಾಮಾ ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿದ್ದೆ ಎನ್ನುವುದು ನಿಜವಲ್ಲ. ಪ್ರತಿವಾದಿಯ ಗಂಡ ಅನಾರೋಗ್ಯದಲ್ಲಿದ್ದಾಗ ನಾನು ಎರಡು ಬಾಂಡ್ ಪೇಪರಗಳನ್ನು ಬ್ಯಾಂಕಗಳಿಂದ ಪಡೆದುಕೊಂಡಿದ್ದೆ ಎನ್ನುವುದು ನಿಜವಲ್ಲ.

**11.** ಪ್ರತಿವಾದಿಯ ಗಂಡ ತೀರಿಕೊಳ್ಳುವ ಸುಮಾರು ಮೂರು ತಿಂಗಳ ಹಿಂದೆ ಸ್ನಾನದ ಕೋಣೆಯಲ್ಲಿ ಬಿದ್ದು ಪ್ರಜ್ಞಾಹೀನರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡ ತೀರಿಕೊಳ್ಳುವ ಮೂರು ತಿಂಗಳ ಹಿಂದಿನಿಂದ ಹುಬ್ಬಳ್ಳಿಯ ಕೆ ಎಲ್ ಇ ಆಸ್ಪತ್ರೆಯ ಐಸಿಯುವಿನ ವೆಂಟಿಲೆಟರನಲ್ಲಿದ್ದರು ಎಂದರೆ ಸಾಕ್ಷಿ ಇದ್ದರು ಆದರೆ ಯಾವ ಕಾಲಕ್ಕೆ ಎನ್ನುವುದು ನನಗೆ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ. ಆ ಕಾಲಕ್ಕೆ ಪ್ರತಿವಾದಿಯ ಗಂಡನಿಗೆ ಮಾತನಾಡಲು ಮತ್ತು ಅವರ ಪ್ರತಿನಿತ್ಯದ ಕೆಲಸಗಳನ್ನು ಮಾಡಲು ಆಗುತ್ತಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

**12.** ಪ್ರತಿವಾದಿಯ ಗಂಡ ದಿನಾಂಕ **29.10.2009** ರಂದು ಹುಬ್ಬಳ್ಳಿಯ ಕೆ ಎಲ್ ಇ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದರು ಎನ್ನುವುದು ನಿಜ. ಪ್ರತಿವಾದಿಯ ಗಂಡನ ಅನಾರೋಗ್ಯವನ್ನು ದುರುಪಯೋಗ ಪಡಿಸಿಕೊಂಡು ನಾನು ಖೊಟ್ಟಿ ಲೀಜ್ ಡಿಡನ್ನು ಸೃಷ್ಟಿಸಿದ್ದೆ ಎನ್ನುವುದು ನಿಜವಲ್ಲ.

**13.** ಅಬಕಾರಿ ಇಲಾಖೆಯವರು ಲಿಕ್ಕರ್ ಲೈಸೆನ್ಸನ್ನು ಲೀಜ್ ಮಾಡಲು ಪರವಾನಿಗೆ ಕೊಡಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನೀವು ಅನ್ನಪೂರ್ಣಾ ಬಾರ್ ಆ್ಯಂಡ್ ರೆಸ್ಟೋರೆಂಟನಲ್ಲಿ ಎಷ್ಟು ವರ್ಷ ಕೆಲಸ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಕೆಲಸ ಮಾಡಿಲ್ಲ, ಆದರೆ **9** ವರ್ಷ ಲೀಜ್ ಪಡೆದು ಅದನ್ನು ನಡೆಸಿದ್ದೇನೆ ಎನ್ನುತ್ತಾರೆ. ಆ

ಕಾಲಕ್ಕೆ ನಾನು ಅಬಕಾರಿ ಇಲಾಖೆಯ ಕಚೇರಿಗೆ ಹೋಗಿ ವ್ಯವಹಾರ ಮಾಡುವುದು ಮತ್ತು ಮದ್ಯ ಖರೀದಿ ಮಾಡುವುದು ಮೊದಲಾದ ಕೆಲಸಗಳನ್ನು ಮಾಡಿದ್ದೆನು. ರಾ ಎಲ್ಲಾ ವ್ಯವಹಾರಗಳನ್ನು ನಾನು ಪ್ರತಿವಾದಿಯ ಗಂಡ ಜೀವಂತ ಇರುವಾಗ ಆತನ ಹೆಸರಿನಲ್ಲಿಯೇ ಮಾಡಿದ್ದೆನು. ನಾನು ನನ್ನ ಸ್ವಂತ ಹೆಸರಿನಲ್ಲಿ ಆ ಬಾರ್ ಆ್ಯಂಡ್ ರೆಸ್ಟೊರೆಂಟನ ಯಾವುದೇ ವ್ಯವಹಾರಗಳನ್ನು ಮಾಡಿಲ್ಲ. ಬಾರ್ ಆ್ಯಂಡ್ ರೆಸ್ಟೊರೆಂಟನ ಯಾವುದೇ ವ್ಯವಹಾರವನ್ನು ಲೈಸೆನ್ಸ ಪಡೆದವರೇ ಮಾಡಬೇಕು ಎನ್ನುವುದು ನಿಜ. ನಾನು ಅನ್ನಪೂರ್ಣಾ ಬಾರ್ ಆ್ಯಂಡ್ ರೆಸ್ಟೊರೆಂಟನ ವ್ಯವಹಾರಗಳನ್ನು ಅದರ ಮ್ಯಾನೇಜರ್ ಆಗಿ ಮಾಡಿದ್ದೆ ಎನ್ನುವುದು ನಿಜವಲ್ಲ.

**14.** ನಿಪಿ-**1** ರಲ್ಲಿರುವ ಸ್ಟ್ಯಾಂಪ ಪೇಪರನಲ್ಲಿರುವ ತಾರೀಖು ಮತ್ತು ಹೆಸರನ್ನು ಬ್ಯಾಂಕನವರು ಬರೆದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-**1** ಪ್ರತಿ ಪುಟದಲ್ಲಿ ನನ್ನ ಮತ್ತು ಪ್ರತಿವಾದಿಯ ಗಂಡನ ಸಹಿ ಇರುವುದಿಲ್ಲ. ನಿಪಿ-**1** ನ್ನು ಯಾರು ಮತ್ತು ಎಲ್ಲಿ ಟೈಪ್ ಮಾಡಿಸಿದ್ದು ಎಂದರೆ ಸಾಕ್ಷಿ ಅದನ್ನು ಪ್ರತಿವಾದಿಯ ಗಂಡನೇ ಮಾಡಿಸಿ ತಂದಿದ್ದು ಎನ್ನುತ್ತಾರೆ. ನಿಪಿ-**1** ರ **4** ನೇ ಪುಟದಲ್ಲಿರುವ ಸಹಿ ಪ್ರತಿವಾದಿಯ ಗಂಡನದ್ದು ಅಲ್ಲ ಮತ್ತು ಅದನ್ನು ನಾನು ಸೃಷ್ಟಿಸಿದ್ದೇನೆ ಎನ್ನುವುದು ನಿಜವಲ್ಲ.

**15.** ನಿಪಿ-**1** ರಲ್ಲಿ ರೂ.**5,00,000/-** ಮುಂಗಡ ಹಣವನ್ನು ನಾನು ಪ್ರತಿವಾದಿಯ ಗಂಡನಿಗೆ ಕೊಟ್ಟಿರುವ ಬಗ್ಗೆ ಎಲ್ಲಿಯೂ ಬರೆದಿಲ್ಲ ಎನ್ನುವುದು ನಿಜವಲ್ಲ. ಆ ಪತ್ರ ಆದ ದಿನ ನನ್ನ ಬ್ಯಾಂಕ್ ಖಾತೆಯಲ್ಲಿ ರೂ.**5,00,000/-** ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಆ ರೂ.**5,00,000/-** ಹಣವನ್ನು ನಾನು ಎಲ್ಲಿಂದ ತಂದಿದ್ದೆ ಎನ್ನುವುದು ನನಗೆ ನೆನಪಿರುವುದಿಲ್ಲ. ಪ್ರತಿವಾದಿಯ ಗಂಡನಿಗೆ ಆ ರೂ.**5,00,000/-** ಹಣ ತಲುಪಿದ ಬಗ್ಗೆ ನಾನು ಯಾವುದೇ ಪಾವತಿ ಪಡೆದುಕೊಂಡಿಲ್ಲ. ನನ್ನ ಬಳಿ ಆದಿನ ರೂ.**5,00,000/-** ಇತ್ತು ಎಂದು ತೋರಿಸಲು ನಾನು ಯಾವುದೇ ಸಾಕ್ಷಿಯನ್ನು ಹಾಜರು ಮಾಡುವುದಿಲ್ಲ. ನಾನು ಆ ಕಾಲಕ್ಕೆ ಆ

ಬಾರ್ ಆ್ಯಂಡ್ ರೆಸ್ಟೊರೆಂಟನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದರಿಂದ ನನಗೆ ರೂ.5,00,000/- ಕೊಡುವ ಸಾಮರ್ಥ್ಯ ಇರಲಿಲ್ಲ ಎನ್ನುವುದು ನಿಜವಲ್ಲ.

16. ನಿಪಿ-1 ರ ಪ್ಯಾರಾ 5 ರಲ್ಲಿ ಬರೆದಿರುವಂತೆ ನಾನು ಪರ್ನಿಚೆರಗಳನ್ನು ಯಾರಿಂದ ಖರೀದಿ ಮಾಡಿದ್ದೆ ಎಂದು ನನಗೆ ಹೇಳಲಾಗುವುದಿಲ್ಲ. ಆ ಕಾಲಕ್ಕೆ ನಾನು ಹೊಸ ಪರ್ನಿಚರಗಳನ್ನು ಖರೀದಿ ಮಾಡಿರುವ ಬಗ್ಗೆ ಯಾವುದೇ ರಶೀದಿಗಳು ನನ್ನ ಬಳಿ ಇಲ್ಲ. ನಾನು ಖರೀದಿ ಮಾಡಿರುವ ಪರ್ನಿಚರಗಳ ಲಿಸ್ಟನ್ನು ನಿಪಿ-1 ಕ್ಕೆ ಲಗತ್ತಿಕರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆ ಲೀಜ್ ಅಗ್ರಿಮೆಂಟ ಮೂಲಕ ನಾನು ರೂ.5,00,000/- ಮುಂಗಡ ಹಣವನ್ನು ಕೊಟ್ಟಿದ್ದರಿಂದ ಮತ್ತು ಪರ್ನಿಚರಗಳನ್ನು ಖರೀದಿ ಮಾಡಿರುವುದರಿಂದ ಆ ಲೀಜ್ ಅಗ್ರಿಮೆಂಟನ್ನು ನೋಂದಣಿ ಮಾಡುವ ಪ್ರಯತ್ನ ನಾನು ಮಾಡಿಲ್ಲ.

17. ನಿಪಿ-1 ರಲ್ಲಿ ಬರೆದಿರುವ ಲೈಸೆನ್ಸ ಫೀಯನ್ನು ಪ್ರತಿವಾದಿಯ ಗಂಡ ಮತ್ತು ಆತನ ತೀರಿಕೊಂಡ ನಂತರ ಪ್ರತಿವಾದಿಯ ಹೆಸರನಲ್ಲಿಯೇ ಪಾವತಿ ಮಾಡಲಾಗಿದೆ ಎನ್ನುವುದು ನಿಜ. ನಾನು ಎಷ್ಟು ಹಣವನ್ನು ಲೈಸೆನ್ಸ ಫೀ ಆಗಿ ಅಬಕಾರಿ ಇಲಾಖೆಗೆ ಕಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. 2009 ನೇ ಸಾಲಿನಲ್ಲಿ ರೂ.2,60,000/- ಲೈಸೆನ್ಸ ಫೀ ಇತ್ತು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. 2009 ನೇ ಸಾಲಿನಲ್ಲಿ ಪ್ರತಿವಾದಿಯ ಗಂಡ ಬೈಲಹೊಂಗಲದ ಎಸ್ ಬಿ ಐ ಶಾಖೆಯ ಚೆಕ್ ಮೂಲಕ ರೂ.2,60,000/- ಲೈಸೆನ್ಸ ಫೀಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ಕಟ್ಟಿರಬಹುದು ಎನ್ನುತ್ತಾರೆ.

18. ನಿಪಿ-1 ರ ಕಲಂ 15 ಪ್ರಕಾರ ನಾನು ಆ ಬಾರ್ ಆ್ಯಂಡ್ ಲೈಸೆನ್ಸನ ಕಟ್ಟಡವನ್ನು ಬೇರೆಯವರಿಗೆ ಪೋಟ ಬಾಡಿಗೆ ಕೊಡಬಾರದು ಎಂದು ಬರೆದಿದ್ದಾರೆ ಎನ್ನುವುದು ನಿಜ. ನನ್ನ ಪ್ರಕಾರ ನಾನು ಆ ಬಾರ್ ಆ್ಯಂಡ್ ರೆಸ್ಟೊರೆಂಟನ ಲೈಸೆನ್ಸ, ವ್ಯವಹಾರ ಮತ್ತು ಕಟ್ಟಡಗಳನ್ನು ನಿಪಿ-1 ಪ್ರಕಾರ ಲೀಜ್ ಪಡೆದುಕೊಂಡಿದ್ದೆ ಎಂದು ನಾನು ಹೇಳುತ್ತೇನೆ. ನಿಪಿ-1 ರಲ್ಲಿ ಪ್ರತಿವಾದಿಯ ಗಂಡನ ವಿಳಾಸ ಬೈಲಹೊಂಗಲ ಎಂದು

ಬರೆದಿದ್ದು ಸುಳ್ಳು ಇದೆ ಎಂದರೆ ಸಾಕ್ಷಿ ಅದನ್ನು ಅವರೇ ಬರೆಸಿದ್ದು ಎನ್ನುತ್ತಾರೆ. ನಾನು ನಿಪಿ-1 ನ್ನು ಓದಿ ನೋಡಿ ಸಾಕ್ಷಿದಾರರ ಸಮ್ಮುಖ ಸಹಿ ಮಾಡಿದ್ದೆನು. ಸಾಕ್ಷಿ ಪುನಃ ಸಾಕ್ಷಿದಾರರ ಸಹಿಯನ್ನು ಕೂಡಾ ಪ್ರತಿವಾದಿಯ ಗಂಡನೆ ಮಾಡಿಸಿ ತಂದಿದ್ದು ಎನ್ನುತ್ತಾರೆ. ನಿಪಿ-1 ಆಗಿದೆ ಎಂದು ಹೇಳುವ ಕಾಲಕ್ಕೆ ಪ್ರತಿವಾದಿಯ ಗಂಡನಿಗೆ ಪ್ರಜ್ಞೆ ಇರಲಿಲ್ಲ ಮತ್ತು ನಾನು ಅದನ್ನು ಸೃಷ್ಟಿಸಿದ್ದೇನೆ ಎನ್ನುವುದು ನಿಜವಲ್ಲ. ನಿಪಿ-1 ನ್ನು ಪ್ರತಿವಾದಿಯ ಗಂಡ ನಿಮಗೆ ಬರೆದು ಕೊಟ್ಟಿದ್ದೆ ಅಥವಾ ನೀವು ಅದನ್ನು ಅವರಿಗೆ ಬರೆದು ಕೊಟ್ಟಿದ್ದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**19.** ನಿಪಿ-1 ಕ್ಕೆ ನಾನು ಸಹಿ ಮಾಡಿದಾಗ ಅಲ್ಲಿ ಪ್ರತಿವಾದಿಯ ಗಂಡ ಇರಲಿಲ್ಲ ಎನ್ನುವುದು ನಿಜವಲ್ಲ. ನಿಪಿ-1 ಆಗಿದೆ ಎಂದು ಹೇಳುವ ಕಾಲಕ್ಕೆ ಪ್ರತಿವಾದಿಯ ಗಂಡ ಹುಬ್ಬಳ್ಳಿಯ ಕೆ ಎಲ್ ಇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು ಎನ್ನುವುದು ನಿಜವಲ್ಲ. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದವನ್ನು ನಾನು ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮಾಡಿಸುವುದಿಲ್ಲ.

(ಈ ಸಂದರ್ಭದಲ್ಲಿ ಸಾಕ್ಷಿಯ ಮುಂದಿನ ಪಾಟೀ ಸವಾಲಿಗೆ ಸಮಯ ಕೇಳುತ್ತಾರೆ. ಸಮಯ ನೀಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ ).

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.